೨

ಲೇಖಕರು: ಸಿಸು ಸಂಗಮೇಶ
ಆಕರ: ಸಿಸು ಸಂಗಮೇಶ ಆಯ್ದ ಮಕ್ಕಳ ಸಾಹಿತ್ಯ
ಸಂಪಾದಕರು: ಪ್ರೊ. ಸಿದ್ದಣ್ಣ ಬಿ. ಉತ್ನಾಳ
ಪ್ರಕಾಶನ: ಕನ್ನಡ ಪುಸ್ತಕ ಪ್ರಾಧಿಕಾರ

ಚಿತ್ರಗಳು: ಮಲ್ಲಪ್ಪ ಅ. ನಾಟಿಕಾರ, ವಿಜಯಪುರ

ಜನವರಿ – ಫೆಬ್ರವರಿ – ಮಾರ್ಚ್ ೨೦೨೫

ಆರಂಭ ಯೋಜನೆ
**Arambha 2024-25 Project is Supported by Many Individual Donors**

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
**Dhwani Educational Resource Centre**

ಕವನ ಚಿತ್ರಪಟ

# ಕಾಡಿನಲ್ಲಿ ಕ್ರಿಕೆಟ್



ಚೋಟು ಕಾಲಿನ ಬಿಳಿಯ ಮೊಲಣ್ಣ
ಕರಿಯನಾಟಕೆ ಕರೆದನು
ಡೊಳ್ಳು ಹೊಟ್ಟೆಯ ಆನೆ ಕರಿಯನು
ನಿದ್ದೆ ಕಣ್ಣನು ತೆರೆದನು




“ಬ್ಯಾಟು ಚೆಂಡನು ನಾನು ತಂದಿಹೆ
ಚೆಂಡಿನಾಟವ ಆಡುವ
ನೀನು ದೊಡ್ಡವ, ನಾನು ಸಣ್ಣವ
ಯಾರು ಗೆಲುವರು ನೋಡುವ!”


ನಿದ್ದೆಗಣ್ಣಲಿ ಚೆಂಡು ಹೊಡೆದನು
ಮೆಲ್ಲಮೆಲ್ಲಗೆ ಕರಿಯನು
ಜಿಗಿದು ಓಡುತ ಹಿಡಿದು ಎಸೆದನು
ಔಟು ಮಾಡಿದ ಬಿಳಿಯನು

ಎದೆಯ ಉಬ್ಬಿಸಿ ಬ್ಯಾಟು ಬೀಸುತ
ಬಿಳಿಯ ಕರಿಯಗೆ ಹೇಳಿದ
ಕರಿಯ ಎಸೆದಿಹ ಚೆಂಡು ಹೊಡೆಯುತ


“ಚೆಂಡು ಹಿಡಿಯಲು ಓಡಿ ಹೋಗುತ
ದಾರಿಯಲ್ಲಿಯೆ ಬಿದ್ದಿಹೆ,
ನಾಲ್ಕು ಓಟವ ನಾನು ತೆಗೆದೆನು
ಈಗ ನಾನೇ ಗೆದ್ದಿಹೆ!”






ಕರಿಯ ಹೇಳಿದ,“ನನ್ನ ಸರದಿಯು
ಕೈಗೆ ಕೊಡುಕೊಡು ಬ್ಯಾಟನು
ನೀನು ಎಸೆಯುವ ಚೆಂಡು ಹೊಡೆವೆನು
ನಾನು ತೆಗೆಯುವೆ ಓಟನು!”


“ಇಕೊ ಹೊಡೆದೆನು ನೋಡುತಿರು ನೀ
ಚೆಂಡು ಹೋಗುವದೆಲ್ಲಿಗೆ!
ಎಲ್ಲು ನಿಲ್ಲದೆ ಜಿಗಿದು ಓಡುತ
ಹಿಡಿದು ಎಸೆ ನೀ ಇಲ್ಲಿಗೆ”


ಜೋರಿನಿಂದಲೆ ಹೊಡೆದ ರಭಸಕೆ
ಚೆಂಡು ಆಗಸಕೇರಿತು
ಆಟದಂಗಳ ಪೇಟೆ ಬೀದಿಯ
ದಾಟಿ ದೂರಕೆ ಹಾರಿತು




“ಓಡುತೋಡುತ ನನ್ನ ಓಟವ
ಎಣಿಸು ನಿನ್ನಯ ಬೆರಳಲಿ
ನೀನು ಬರುತಲಿ ಎಬ್ಬಿಸೆನ್ನನು
ನಿದ್ದೆ ಮಾಡುವೆ ನೆರಳಲಿ”

ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.

**ಶಿಕ್ಷಕರಲ್ಲಿ ನಿವೇದನೆ:**
ಈ ವಿಶಿಷ್ಟ ಚಿತ್ರಪಟವನ್ನು ಮಕ್ಕಳಿಗೆ ತೋರಿಸುತ್ತಾ ಕವನವನ್ನು ಒಮ್ಮೆ ಓದಿ ಹೇಳಿ. ನಂತರ ಮಕ್ಕಳೇ ಸ್ವತಃ ವಾಚಿಸಲು ಮತ್ತು ರಾಗವಾಗಿ ಹಾಡಲು ಪ್ರೋತ್ಸಾಹಿಸಿ. ಅನಂತರ ಅವರದೇ ಆದ ರೀತಿಯಲ್ಲಿ ಸಂಭಾಷಣೆ ನಡೆಸಲು, ಕಿರು ರೂಪಕ ಮಾಡಲು ಪ್ರೇರೆಪಿಸಿ.

**ಸಂಪರ್ಕ ಮಾಹಿತಿ**
ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
# 76,‘ಪುಷ್ಪಾಂಜಲಿ’ 3ನೇ ಅಡ್ಡರಸ್ತೆ, ಶಿವಗಿರಿ,
ಧಾರವಾಡ–580007, ಮೊ. 998 666 1055
dhwanitrust@gmail.com / www.dhwanitrust.org